MYSORE LEGISLATIVE ASSEMBLY.

FORTY-THIRD DAY.

Saturday, 16th April 1955.

The House met in the Legislative Assembly Hall, Old Public Offices, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Land grants to Depressed Classes in Chamarajanagar Taluk.

Q.—162. **Sri B. RACHIAH** (Yelandur—Scheduled Castes).—

Will the Government be pleased to state :—

(*a*) the number of acres of land available for darkhast in Chamarajanagar Taluk ;

(*b*) the total number of applications received for the last five years (Separate figures are requested for general and depressed classes) ;

(*c*) the number and extent of land granted for the last five years ;

(*d*) the number of depressed class grantees under D.C.D. Rules and G.M.F. Rules ;

(*e*) the number of depressed class grantees under G.M.F. cancelled and confirmed ?

A.—Sri **Kadidal MANJAPPA** (Minister for Revenue and Public Works).—

(*a*) Acres 30,743 Guntas 39

(*b*)—

	General	*Depressed Classes*
1949-50	391	14
1950-51	175	5
1951-52	184	1
1952-53	342	...
1953-54	288	1
Total	1,380	21

(*c*)—

	GENERAL		
	No.	*Extent*	
		A.	g.
1949-50	60	321	22
1950-51	67	318	27
1951-52	48	455	16
1952-53	59	197	29
1953-54	27	79	30
	DEPRESSED		
1949-50	14	484	9
1950-51	5	72	0
1951-52	1	8	0
1952-53	...	...	
1953-54	1	2	0

(*d*) D.C.D. Rules 21 G.M.F. Rules 375

(*e*) Confirmed 48 Cancelled 82

ಶ್ರೀ ಬಿ. ರಾಚಯ್ಯ.—ಈಗ ಕೊಟ್ಟಿರತಕ್ಕ ಅಂಕಿ ಅಂಶಗಳು ವಾಸ್ತವಾಂಶಕ್ಕೆ ದೂರವಾಗಿವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ಧರವಾಗಿ ಅದನ್ನು ಹೇಳಲಾರೆ. ಬಹಳ ಕಡಿಮೆ ಸಂಖ್ಯೆಯನ್ನು ಕೊಟ್ಟಿರುವಂತೆ ಇದೆ. ಅದನ್ನು ವಿಚಾರಿಸುತ್ತೇನೆ.

ಶ್ರೀ ಬಿ. ರಾಚಯ್ಯ.—(ಸಿ) ಭಾಗಕ್ಕೆ ಉತ್ತರವಾಗಿ 1949-50ನೇ ಸಾಲಿನಲ್ಲಿ 484 ಎಕರೆ 9 ಗುಂಟೆ ಜಮೀನನ್ನು 14 ಜನಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇದಕ್ಕೆ ವಿವರಗಳನ್ನು ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ದರಖಾಸ್ತುದಾರರ ಹೆಸರುಗಳನ್ನು ಕೊಟ್ಟಿಲ್ಲ, ಹಳ್ಳಿಗಳ ಹೆಸರುಗಳನ್ನು ಮಾತ್ರ ಕೊಟ್ಟಿದ್ದಾರೆ.

ಶ್ರೀ ಬಿ. ರಾಚಯ್ಯ.—ಹಳ್ಳಿಗಳ್ಯಾವುವು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರಿಗೆ ಬೇಕಾದರೆ ನನ್ನ ಹತ್ತಿರವಿರತಕ್ಕ ಪಟ್ಟಿಗಳನ್ನು ಕೊಡುತ್ತೇನೆ. ಅವನ್ನು ನೋಡಿಕೊಳ್ಳಬಹುದು.

ಶ್ರೀ ಬಿ. ರಾಚಯ್ಯ.—30,000 ಎಕರೆ ಜಮೀನು ಸಾಗುವಳಿಗೆ ಕೊಡುವುದಕ್ಕೆ ಇದ್ದರೂ ಸಹ general classನ 1,380 ಜನಕ್ಕೆ ಜಮೀನು ಕೊಟ್ಟಿಲ್ಲ. ಇವರಿಗೂ ಸಹ ಜಮೀನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಜಿಲ್ಲಾಧಿಕಾರಿಗಳು ನನಗೆ ಕಳುಹಿಸಿರುವ ವರದಿಯಲ್ಲಿ, ಜಮೀನು ಇದ್ದ ಕಡೆ ದರಖಾಸ್ತು ಬಂದಿಲ್ಲವೆಂದು ಹೇಳಿದ್ದಾರೆ.

ಶ್ರೀ ಬಿ. ರಾಚಯ್ಯ.—G.M.F. ಸ್ಕೀಂನಲ್ಲಿ ಕೊಟ್ಟಿರತಕ್ಕ 375 ಜನ depressed class granteesನಲ್ಲಿ 48 ಜನಕ್ಕೆ confirm ಮಾಡಿ 82 ಜನಕ್ಕೆ cancel ಮಾಡಿದ್ದೀರಿ. ಪಹಣಿಯನ್ನು ಸರಿಯಾದ ರೀತಿಯಲ್ಲಿ ಬರೆಯದೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಬರೆದಿರುವುದರಿಂದಲ್ಲವೆ ಈ ರೀತಿ cancel ಆಗಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳುವುದಕ್ಕಾಗುವುದಿಲ್ಲ. G.M.F. grant ನೀತಿಗನುಗುಣವಾಗಿ ವರ್ತಿಸಿಲ್ಲವೆಂದು ವರದಿಗಳನ್ನು ಕಳುಹಿಸಿದ್ದಾರೆ.

ಶ್ರೀ ಬಿ. ರಾಚಯ್ಯ.—ಈ ಸ್ಕೀಂ ಪ್ರಕಾರ ಐದು ವರ್ಷ ಅವರು ಸಲೀಸಾಗಿ ಸಾಗುವಳಿಯನ್ನು ಮಾಡಬೇಕು ಮತ್ತು ಅಲ್ಲಿರತಕ್ಕ ಗಿಡಮರಗಳನ್ನು ಕಡಿಯುವುದು ಇತ್ಯಾದಿ ಮಾಡಕೂಡದು ಎಂದಿದೆ. ಅವರು ಈ ರೀತಿ ಸಾಗುವಳಿ ಮಾಡುವಾಗ ಕಾನೂನಿನ ಒಂದೆರಡು ನಿಯಮಗಳನ್ನು ಉಲ್ಲಂಘಿಸಿದರೂ Depressed Class granteesಗೆ ಆ ಜಮೀನನ್ನು ಖಾಯಂ ಮಾಡುವುದಕ್ಕೆ ಸರ್ಕಾರದವರ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಮಾಡಿರುವ ರೂಲ್ಸ್ ಪ್ರಕಾರ G.M.F. grantee ದರಖಾಸ್ತುದಾರ ನಿಮ್ನ ವರ್ಗದವನಾಗಲೀ ಇತರೆಯವನಾಗಲೀ, ಬಡವನಾಗಿದ್ದು ಜಮೀನಿಲ್ಲದೆ ಇದ್ದು ಅಥವಾ insufficient holders ಆಗಿದ್ದರೆ, ಅವರು ಕಂಡಿಷ್ಟ್ ಪ್ರಕಾರ ನಡೆದುಕೊಳ್ಳದೆ ಇದ್ದರೂ ಕೂಡ ಜಮೀನು ಕೊಡುವುದಕ್ಕೆ ರೂಲ್ಸ್ ಮಾಡಿದೆ.

ಶ್ರೀ ಬಿ. ರಾಚಯ್ಯ.—ಚಾಮರಾಜನಗರ ತಾಲ್ಲೂಕು ಆಫೀಸಿನಲ್ಲಿ ಆ ತಾಲ್ಲೂಕಿನಲ್ಲಿ ಜಮೀನು ಇಲ್ಲದೆ ಇರತಕ್ಕಂಥವರ ಸಂಖ್ಯೆ ಮತ್ತು ವಿವರ ಸಿಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನಿಲ್ಲದವರ ವಿವರ ಸಿಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ತಾವು ಮನಸ್ಸು ಮಾಡಿ ಅಲ್ಲಿಗೆ ಬಂದರೆ ಜಮೀನಿಲ್ಲದವರ ವಿವರಗಳನ್ನು ಕೊಡುತ್ತೇನೆ. ಅವರಿಗೆಲ್ಲ ಸ್ಥಳದಲ್ಲಿಯೆ ಜಮೀನು ಕೊಟ್ಟರೆ 30 ಸಾವಿರ ಎಕರೆ ಜಮೀನು ಸಾಗುವಳಿಗೆ ಬಂದು ಆಹಾರ ಉತ್ಪತ್ತಿ ಹೆಚ್ಚಾಗುವುದರಿಂದ ಆ ರೀತಿ ಮಾಡಲು ಯೋಚನೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಡೆಪ್ಯುಟಿ ಕಮಿಷನರಿಗೆ ಬರೆದು, ತಾಲ್ಲೂಕು ಆಫೀಸಿಗೆ ಹೋಗಿ ಈಗಿರತಕ್ಕ available extent of landನ್ನು ಹಂಚಿಕೆ ಮಾಡಬೇಕೆಂದು ಸೂಚನೆ ಕೊಡುತ್ತೇನೆ.

ಶ್ರೀ ಬಿ. ರಾಚಯ್ಯ.—ಐದು ವರ್ಷಗಳಿಗೆ ಹಿಂದೆ, 1942ನೇ ಇಸವಿಯಿಂದಲೂ ಕೂಡ ಅರ್ಜಿಗಳು ಇತ್ಯರ್ಥವಾಗದೆ ದರಖಾಸ್ತು ರಿಕಾರ್ಡುಗಳು 2—3 ಸಲ build-up ಆಗಿ ಹಾಗೆಯೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು. ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಇದೇ ಮಾನ್ಯ ಸಭೆಯ ಕಳೆದ ಅಕ್ಟೋಬರ್ ಅಧಿವೇಶನದಲ್ಲಿ, ಒಂದು ರಿಕಾರ್ಡ್ ಮೂರುಸಲ build up ಆಗಿ ಪುನಃ ಹಾಗೆಯೇ ಉಳಿದಿರುವುದನ್ನು ತಮ್ಮ ಗಮನಕ್ಕೆ ತಂದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳಿದ್ದಿರಿ. ನಿರ್ದಿಷ್ಟವಾದ ಸೂಚನೆಯನ್ನು ಕೂಡ ಕೊಟ್ಟಿರಿ. ಶಾಸನ ಸಭೆಯ ಅಧಿವೇಶನ ಮುಗಿದ ತರುವಾಯ ಅಮಲ್ದಾರರಿಗೆ ಮತ್ತು ಸಬ್-ಡಿವಿಷ್ಟ್ ಅಧಿಕಾರಿಗಳಿಗೆ ಹೆಚ್ಚು ಅಧಿಕಾರ ಕೊಟ್ಟು ಎಲ್ಲೆಲ್ಲಿ ಹೆಚ್ಚು ಜಮೀನಿದೆ ಅದನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ರಾಚಯ್ಯ.—ತಾವು ಹಿಂದೆ ಅಮಲ್ದಾರರಿಗೆ Depressed Class Rules ಪ್ರಕಾರ ಆ ವರ್ಗದ ಪ್ರತಿಯೊಬ್ಬರಿಗೂ ಎರಡು ಎಕರೆ ಜಮೀನು ಕೊಡುವುದಕ್ಕೆ ಅವಕಾಶವಿದೆ ಎಂದು ಒಂದು circular ಕೊಟ್ಟಿದ್ದುದು ನಿಜವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಬಿ. ರಾಚಯ್ಯ.—1954ನೇ ಆಗಸ್ಟ್ Government Order ಪ್ರಕಾರ ಆ ಒಂದು ಹಕ್ಕನ್ನು ಸರ್ಕಾರವರು ವಾಪಸು ತೆಗೆದುಕೊಂಡಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—Depressed Class ವರ್ಗಗಳ ರೂಲ್ಸ್ ಪ್ರಕಾರ ಅಮಲ್ದಾರರಿಗೆ ಏನು ಅಧಿಕಾರವಿದೆ ಮತ್ತು ಆಗಸ್ಟ್ ಸರ್ಕಾರಿ ಆಜ್ಞೆಯಂತೆ ಹೇಗಿದೆ ಎನ್ನುವುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ಆ ರೂಲ್ಸ್ ಪ್ರಕಾರ ಏನು ಅಧಿಕಾರವಿದೆ ಅದನ್ನು ಅಮಲ್ದಾರರಿಗೇ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಮಾಡುತ್ತೇನೆ.

Melukunte Tank of Kasaba Hobli in Sira Taluk (Estimate to increase capacity)

Q.—720. Sri B. N. RAME GOWDA (Sira).—

Will the Government be pleased to state :—

(*a*) whether estimates were prepared and sanctioned to increase the capacity of Melukunte tank of kasaba hobli in Sira Taluk;

(*b*) if so, when and what action has been taken to undertake these works?

A—Sri Kadidal MANJAPPA (Minister for Revenue and Public Works).—

(*a*) The estimate has been prepared but not yet sanctioned.

(*b*) The estimate was originally prepared in 1952 and is being finalised.

ಶ್ರೀ ಬಿ. ಎಸ್. ರಾಮೇಗೌಡ.—ನದರಿ ಕೆರೆಯ ಎಸ್ಟಿಮೇಟ್ ಇನ್ನೂ pendingನಲ್ಲರುವುದರಿಂದ ಈ